ದೊಡ್ಡ ಜಾಗದಲ್ಲಿ ಬೇಡ ಅಂದ್ರೆ ಕೇಳಲಿಲ್ಲ. ಇರೋದಿಬ್ರು, ಅಷ್ಟೆಲ್ಲಾ ಬೆಲ್ಲ ಯಾರು ತಿಂತಾರೆ? ಕೈಗೆ ಕೆಲಸ ಕೊಡಬೇಕಂತ ಮೈಯೆಲ್ಲಾ ಗುದ್ದಿಕೊಂಡ್ರಂತೆ. ನಿಮಗೆ ಗೊತ್ತಾಗೋದಿಲ್ಲ.' ಸುಮ್ಮನೆ ನಕ್ಕ ಗಂಡನ್ನ ನೋಡುತ್ತ 'ಯಂಕಪ್ಪಂಗೆ ಈಗ್ಲೇ ಹೇಳಿಡಿ, ಟ್ರಾಕ್ಟರು ಬೇಕು ಅಂತಾ. ಮುದ್ದಳ್ಳಿ ಕರೆಂಟುಗಾಣಕ್ಕೆ ಸಾಗಿಸ್ಬೇಕಲ್ಲ. ಗೌಡ್ರ ಹತ್ರನೂ ಹೇಳಿಡಬೇಕು ನಮ್ಮ ಕಬ್ಬು ಬರೋದಿದೆ ಅಂತ' ಅದಕ್ಕೂ ಏನೂ ಹೇಳದೆ ನಸುನಗುವ ಗಂಡನ್ನ ನೋಡಿ ಸಣ್ಣಕೆ ಕೆರಳಿದ ಗೌರಕ್ಕ, 'ಏನಾಗಿದೆಯೋ ನಿಮಗೆ, ಆ ದೇವರೇ ಬಲ್ಲ...' ಅನ್ನುವಾಗ ಮೊಬೈಲ್ ಸದ್ದುಮಾಡತೊಡಗಿತು. 'ಪ್ರತಿಮಾಂದು' ಅನ್ನುತ್ತಿರುವ ಹೆಂಡತಿಯ ಕೈಯಿಂದ ಕಿತ್ತುಕೊಂಡರು. 'ಅಮ್ಮಾ' ಅಂತ ಆಕಡೆಯಿಂದ ಕೇಳುತ್ತಿದ್ದಂತೆ '...ಅಮ್ಮನಲ್ಲವೇ, ಇದು ನಾನು. ಶಿರಡಿ ಟೂರು ಬಹಳ ಖುಷಿಯಾಗಿತ್ತು. ಎಂಥಾ ಪರಿಸರ! ಅದೂ ರಸ್ತೇಲಿ ಕಬ್ಬಿನಗಾಣ, ದಾಳಿಂಬೇಹಣ್ಣು. ನಾನು ಕನ್ನಡ ಶಾಲೆ ಓದುವಾಗಿನ ನೆನಪಾಗಿಹೋತು ನೋಡು. ನಿಮಗದೆಲ್ಲಾ ಆ ಕೆನಡಾದಲ್ಲೆಲ್ಲಿ ಸಿಗಬೇಕು ಬಿಡು. ಕಬ್ಬಿನಹಾಲಿನ ಹೆಂಡ ಬೇಕಾದ್ರೆ ಹಂಡೆಗಟ್ಲೆ ಸಿಗತದೆ...' ನಗತೊಡಗಿದ ಗಂಡನಿಂದ ಮೊಬೈಲು ಪಡೆದು ಮಾತಾಡಿ ಮುಗಿಸಿದ ಗೌರಕ್ಕ 'ಅಲ್ಲ, ಮಗಳಹತ್ರ ನೀನು ಚೆನ್ನಾಗಿದೀಯ, ಪಾಪು ಚೆನ್ನಾಗಿದಾನಾ ಅಂತ ಒಂದುಮಾತೂ ಕೇಳದೆ ನಿಮ್ಮದೆ ಪುರಾಣ ಒದರಿದ್ದಕ್ಕೆ ಅವಳೂ ಆಶ್ಚರ್ಯಪಟ್ಳು. ಇದೇನಿವತ್ತು ನಿಮ್ಮ ಹೊಸಾ ಪರಿ?' ರೇಗಿದಳು.

ಬೆಳಿಗ್ಗೆ ಹೋದವರು ತೊಟಕ್ಕಿಂತ ಕಬ್ಬಿನಗದ್ದೆಯಲ್ಲೆ ಹೆಚ್ಚು ಸಮಯ ಕಳೆದಿದ್ದರು. ಗದ್ದೆಯನ್ನು ಬಳಸಿ ಹರಿಯುವ ಹಳ್ಳದಿಂದಾಗಿ ಭೂಮಿ ತಂಪಾಗಿತ್ತು. ಚಿಕ್ಕವರಿರುವಾಗ ಶಿವರಾತ್ರಿಯಲ್ಲಿ ಸ್ನಾನ ಮಾಡುವಷ್ಟು ಬಂಡೆಗಳೆಡೆಯ ಮಡುಗಳಲ್ಲಿ ನೀರಿರುತ್ತಿತ್ತು. ಈಗೀಗ ಅಲೆಮಾರಿಗಳ ಸಂಚಾರ ಹೆಚ್ಚಾಯಿತು. ಮೀನು ಹಿಡಿಯಲು ಯಾವುದೋ ಸೊಪ್ಪನ್ನು ಕದಡಿ ನೀರೆಲ್ಲ ಹಾಳುಮಾಡಿಬಿಡುತ್ತಾರೆ. ನೀರಿನ ಹರಿವೂ ಕಮ್ಮಿಯಾಗತಿದೆ. ಸ್ವಲ್ಪ ಮೇಲೆ ಒಡ್ಡು ಹಾಕಿದರೆ ಉತ್ತಮ. ಕಬ್ಬಿಗೆ ನೀರಿನ ವ್ಯವಸ್ಥೆಯಾದೀತು. ಕೈಯೆತ್ತಿದರು. ತಮ್ಮ ತಲೆಮೇಲೆ ಮೂರಡಿ ಎತ್ತರಕ್ಕೆ ತೊನೆದಾಡುತ್ತಿದೆ ಗರಿ. ಲವಲವಿಕೆಯಲ್ಲಿ ಹೆಜ್ಜೆಯೆತ್ತಿಡುತ್ತ ಮನೆ ಸೇರಿದ್ದರು. ಸಂಜೆ ಚಹ ಕುಡಿದು ಕಟ್ಟೆಮೇಲೆ ಕುಳಿತವರೆದುರು ಅಂಗಳದ ತೆಂಗಿನಸಸಿಗಳ ಗರಿಗಳ ಓಲಾಟ ಯಾರನ್ನೋ ನೆರಳು ಬೆಳಕಿನಾಟದಲ್ಲಿ ಸೋಸುತ್ತಾ ಇರುವುದು ಕಂಡು ಕಣ್ಣು ಕಿರಿದುಗೊಳಿಸಿದವರೆದುರು ಮುತ್ತಾಚಾರಿಯ ಕುತ್ತಿಗೆಯ ಮೇಲ್ಭಾಗ ನಂಜಟ್ಲೆ ಗಿಡದ ಮೇಲ್ಗಡೆ ಪ್ರತ್ಯಕ್ಷವಾಗಿ 'ವಡೇರು ಯಾತ್ರೆಯಿಂದ ಬಂದಾಯ್ತಾ?...' ಅನ್ನುವ ಸಲಿಗೆ ಬೆರೆತ ಗೌರವದ ಪ್ರಶ್ನೆ ತೂರಿಬಂತು. ಮುತ್ತಾಚಾರಿಯ ಪ್ರಶ್ನೆ ಅವನಿಗಾಗೆ ಕಾಯುತ್ತಿದ್ದರೋ ಅನಿಸುವಷ್ಟು ಖುಷಿ ನೀಡಿ, ಕರೆದು ಕಟ್ಟೆಯ ಮೇಲೆ ಕುಳ್ಳಿರಿಸಿಕೊಂಡು ಶಿರಡಿ, ಶಿಂಗಣಾಪುರದ ಪ್ರಸಾದ ಕೊಟ್ಟು ಆಸ್ಥೆಯಿಂದ ಪ್ರವಾಸದ ಕಥೆ ಹೇಳುತ್ತಿದ್ದವರಿಗೆ ಇಷ್ಟೂಹೊತ್ತು ಒಳಮನಸ್ಸಿನಲ್ಲಿ ಅಭಿಲಾಷೆಯ ಕಣ್ಣುಮುಚ್ಚಾಲೆಯಾಡುತ್ತಿದ್ದದ್ದು ಸ್ಪಷ್ಟ ನಿರ್ಧಾರವಾಗುತ್ತಾ 'ಹೌದಾ ಮುತ್ತಾಚಾರಿ, ಇಲ್ಲಿ ಯಾರಲ್ಲಾದ್ರು ಆಲೆಕಣೆ ಇರಬಹುದನಾ... ನಿಂಗೊತ್ತಾ?' ಕೇಳಿದರು. 'ಆಲೆಗಾಣವಾ? ಮುದ್ದಳ್ಳಿ ಗೌಡರದ್ದಿತ್ತಲ್ಲಾ... ಅಲ್ಲೇ ಅಲ್ದಾ ಯಾವಾಗಿಂದ್ಲು ನೀವು ಬೆಲ್ಲ ಮಾಡೂದು?...' ಅಂದ. 'ಅದಲ್ಲ ಮಾರಾಯ ನಾ ಕೇಳೂದು...' ಅಂತ ಮನಸ್ಸು ತೆರೆದಾಗ ಆಚಾರಿಗೂ ದಿಗ್ಭ್ರಮೆಯಾಯಿತು. ಗಾಣ ತಂದು ಪ್ರತಿಷ್ಠಾಪಿಸಿ ಅದಕ್ಕೆ ಕೋಣನ್ನ ಕಟ್ಟಿ, ಡಳ್ಳೆಯಿಂದ ಕಬ್ಬಿನಹಾಲು ಮಗೆಮಗೆದು ಕೊಪ್ಪರಿಗೆಗೆ ಹಾಕುತ್ತಾ ಹಗಲು ರಾತ್ರಿ ಆಲೆಮನೆಯಲ್ಲಿ ಸಿಕ್ಕಿಹಾಕಿಕೊಳ್ಳುವ ಆ ಪದ್ಧತಿ ಬಿಟ್ಟು ಎಷ್ಟೋ ವರ್ಷವಾಗಿತ್ತು. ಟ್ರಾಕ್ಟರುಗಟ್ಲೆ ಕಬ್ಬನ್ನು